**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿ ಸಿ ನಂಃ 384-2018**

ಸಾಕ್ಷಿಯ ಹೆಸರು: ಎಂ ರಂಗಯ್ಯ ಸಿ.ಡಬ್ಯ್ಲುಃ 8
ತಂದೆಯ ಹೆಸರು: ಮಂಜಪ್ಪ ಗೌಡ ಪಿ.ಡಬ್ಲ್ಯುಃ 7
ವಯಸ್ಸು : 59 ವರ್ಷ
ಉದ್ಯೋಗ : ಎ.ಎಸ್.ಐ ಸಖರಾಯಪ್ಪಟ್ಟಣ ಠಾಣೆ
ವಾಸ ಸ್ಥಳ : ಸಖರಾಯುಪಟ್ಟಣ

**ದಿನಾಂಕಃ 03-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ನಾನು 2012 ರಿಂದ 2017 ನವೆಂಬರ್ ರವರೆಗೂ ಮುಖ್ಯ ಪೇದೆ ಯಾಗಿ ಪೊಲೀಸ್ ಅರಣ್ಯ ಸಂಚಾರಿ ದಳದಲ್ಲಿ ಕೆಲಸ ಮಾಡಿದ್ದೇನೆ. ಆ ಸಮಯದಲ್ಲಿ ಚಾ.ಸಾ-1 ರವರು ಪಿ.ಎಸ್ ಐ ಆಗಿದ್ದರು.

ದಿಃ05-01-2017 ರಂದು ಬೆಳಿಗ್ಗೆ 5-30 ಗಂಟೆ ಸಮಯದಲ್ಲಿ ಚಾಸಾ-1 ರವರು ತರೀಕೆರೆ ಪಟ್ಟಣದ ಹೊರ ವಲಯದಲ್ಲಿ ಯಾವುದೋ ವ್ಯಕ್ತಿ ಚಿರತೆ ಚರ್ಮ ಮಾರಾಟ ಮಾಡುತ್ತಿರುವ ಬಗ್ಗೆ ಭಾತ್ಮಿ ಬಂದಿದೆ ದಾಳಿಗೆ ಹೋಗೋಣ ಎಂದು ನನಗೆ, ಚಾಸಾ.-9, ಚಾ.ಸಾ-10 ರಿಂದ 14 ಇವರಿಗೆ ತಿಳಿಸಿದರು. ಆ ಪ್ರಕಾರ ನಾವೆಲ್ಲರೂ ತಕ್ಷಣ ಇಲಾಖಾ ವಾಹನದಲ್ಲಿ ತರೀಕೆರೆ ಕಡೆಗೆ ಹೊರಟೆವು. ಅಲ್ಲಿಗೆ ಬಂದಾಗ ಮುಂಜಾನೆ 7-00 ಗಂಟೆ ಆಗಿತ್ತು. ರಸ್ತೆ ಮಧ್ಯದಲ್ಲಿ ಅಂದರೆ ದುಗ್ಲಾಪುರ ಕ್ರಾಸ್ ಹತ್ತಿರ ಚಾ.ಸಾ-2 ಮತ್ತು 3 ಇವರನ್ನು ಪಂಚರನ್ನಾಗಿ ಜೊತೆಗೆ ಕರೆದುಕೊಂಡು ಹೋಗುತ್ತಿದ್ದಾಗ ಗೋವಿಂದಪ್ಪನವರ ಗದ್ದೆಯ ಹತ್ತಿರದಲ್ಲಿ ಒಂದು ಮೋಟಾರ್ ಸೈಕಲ್ ಹತ್ತಿರ 3 ಜನ ವ್ಯಕ್ತಿಗಳು ನಿಂತಿದ್ದರು, ಅನುಮಾನದಿಂದ ಚಾ.ಸಾ-1 ರವರೊಂದಿಗೆ ನಾವೆಲ್ಲರೂ ಸೇರಿ ವ್ಯಕ್ತಿಗಳನ್ನು ಹಿಡಿಯಲು ಪ್ರಯತ್ನ ಮಾಡಿದಾಗ, ಇಬ್ಬರು ಓಡಿಹೋದರು, ಒಬ್ಬ ಆಸಾಮಿ ಮಾತ್ರ ಸಿಕ್ಕನು. ವಿಚಾರಿಸಲಾಗಿ ಆತ ತನ್ನ ಹೆಸರನ್ನು ಟಿ.ಆರ್ ನಾಗರಾಜ ಎಂದು ತಿಳಿಸಿದನು, ಓಡಿಹೋದವರ ಹೆಸರನ್ನು ಸುರೇಶ ಮತ್ತು ರವಿ ಎಂದು ಹೇಳಿದನು. ಅಂಗಶೋಧನೆ ಮಾಡಿದಾಗ, ಆತನ ಮೋಟಾರ್ ಸೈಕಲ್ ಗೆ ಒಂದು ಕೆಂಪು ಬಣ್ಣದ ಬ್ಯಾಗ್ ಇತ್ತು. ಅದರಲ್ಲಿ ಒಂದು ಬಿಳಿ ಬಟ್ಟೆಯಲ್ಲಿ ಒಂದು ಚಿರತೆಯ ಚರ್ಮ ಸುತ್ತಿ ಇಡಲಾಗಿತ್ತು. ಆತನು ಸುರೇಶ ಮತ್ತು ರವಿ ಮಾರಾಟ ಮಾಡಲು ಇದನ್ನು ತಂದಿದ್ದಾರೆ, ಎಲ್ಲಿಂದ ತಂದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ತಿಳಿಸಿದನು. ಕಾರಣ ಪಂಚರ ಸಮಕ್ಷಮ ಮುಂಜಾನೆ 7-30 ರಿಂದ 8-30 ರ ಮಧ್ಯದಲ್ಲಿ ಚಾ.ಸಾ-1 ರವರು ಪಂಚನಾಮೆಯನ್ನು ಜರುಗಿಸಿ, ಒಂದು ಚಿರತೆ ಚರ್ಮ, ಒಂದು ಚಾಕು, ಒಂದು ಮೋಟಾರ್ ಸೈಕಲ್ ಮತ್ತು ಒಂದು ಮೊಬೈಲ್ ಪೋನ್ ಜಪ್ತಿ ಮಾಡಿಕೊಂಡರು. ಮಹಜರ್ ಗೆ ಕ್ರ.ಸಂಖ್ಯೆ 5 ರಂತೆ ನಾನೂ ಕೂಡ ಸಹಿ ಹಾಕಿರುತ್ತೇನೆ. ಅದನ್ನು ನಿ.ಪಿ-5(ಸಿ) ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ಸ್ಥಳ ಪೋಟೋ ಕೂಡ ತೆಗೆಯಲಾಗಿದೆ ಅದರಲ್ಲಿ ನಾನು ಕಂಡುಬರುತ್ತೇನೆ. ಅದಲ್ಲದೆ ಚಿರತೆ ಚರ್ಮ, ಕತ್ತಿ ಕೆಂಪು ಬ್ಯಾಗು, ಬಿಳಿ ಬಟ್ಟೆ ಹಾಗೂ ಆರೋಪಿ ಕೂಡ ಇದ್ದಾರೆ. ನಾನು ಎಡಗಡೆಯಿಂದ 3 ನೇ ವ್ಯಕ್ತಿ ಇರುತ್ತೇನೆ. ಮುದ್ದೆಮಾಲುಗಳನ್ನು ನೋಡಿದರೆ

ಗುರುತಿಸುತ್ತೇನೆ ಅವುಗಳನ್ನು ಈಗಾಗಲೇ ಎಂ.ಓ ಎಂದು ಗುರುತಿಸಲಾಗಿದೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ( ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದಾರೆ ಮತ್ತು ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲ ಎಂದು ಹೇಳುತ್ತಾರೆ.)

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ನಾವು ಆರೋಪಿಗಳನ್ನು ಸುಮಾರು 25 ಅಡಿ ದೂರದಿಂದ ನೋಡಿದ್ದೇವೆ. ಓಡಿಹೋದ ಆರೋಪಿತರು ಯಾವ ಬಣ್ಣದ ಬಟ್ಟೆ ಹಾಕಿಕೊಂಡಿದ್ದರು ಎಂದು ನೆನಪಿಲ್ಲ. ಅವರು ಪಶ್ಚಿಮ ದಿಕ್ಕಿನ ಕಡೆಗೆ ಓಡಿಹೋದರು. ಈ ಬಗ್ಗೆ ಪ್ರಶ್ನೆ ಕೇಳಿದ್ದಕ್ಕಾಗಿ ಉತ್ತರ ಹೇಳುತ್ತಿದ್ದೇನೆ, ಹೇಳಿಕೆಯಲ್ಲಿ ನಮೂದು ಮಾಡಿಲ್ಲ. ದುಗ್ಲಾಪುರ ರಸ್ತೆ ಸಾರ್ವಜನಿಕ ರಸ್ತೆ ಇರುತ್ತದೆ ಎಂದರೆ ಸರಿ , ಜನ ಸಂಚಾರ ಇರುತ್ತದೆ ಎಂದರೆ ಸರಿ. ಪಂಚರಿಗೆ ನೋಟೀಸ್ ಕೊಟ್ಟ ಬಗ್ಗೆ ನನಗೆ ಮಾಹಿತಿ ಇಲ್ಲ , ಚಾ.ಸಾ-1 ಇವರಿಗೆ ಗೊತ್ತು. ಸಾಮಾನ್ಯವಾಗಿ ಪ್ರಾಣಿ ಚರ್ಮಗಳು ವನ್ಯ ಸಂರಕ್ಷಣಾ ಅಧಿಕಾರಿಗಳ ಕಛೇರಿಯಲ್ಲಿ ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಬ್ಯಾಗು ಮತ್ತು ಬಿಳಿ ಬಟ್ಟೆ ಎಲ್ಲಾ ಕಡೆ ಸಾಮಾನ್ಯವಾಗಿ ಸಿಗುತ್ತವೆ ಎಂದರೆ ಸರಿ. ನಾನು ಚಾ.ಸಾ-1 ರವರೊಂದಿಗೆ ಆ ದಿನ ಯಾವುದೇ ದಾಳಿಗೆ ಹೋಗಿಲ್ಲ, ಆರೋಪಿಗಳನ್ನು ಹಿಡಿದಿಲ್ಲ ಅವರಿಂದ ಯಾವುದೇ ತರಹದ ಮುದ್ದೆಮಾಲು ಜಪ್ತಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ನಿ.ಪಿ-5 ನ್ನು ಕಛೇರಿಯಲ್ಲಿ ಕುಳಿತು ಬರೆಯಲಾಗಿದೆ ಎಂದರೆ ಸರಿಯಲ್ಲ. ಫೋಟೋವನ್ನು ಕೂಡ ಮರುಸೃಷ್ಟಿ ಮಾಡಲಾಗಿದೆ ಎಂದರ ಸರಿಯಲ್ಲ. ಆರೋಪಿಗಳಿಗೂ ಈ ಪರಕರಣಕ್ಕೂ, ಮುದ್ದೆಮಾಲಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಠಾಣೆಯ ಅಂಕಿ-ಸಂಖ್ಯೆ ಗೋಸ್ಕರ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಚಾ.ಸಾ-1 ನನ್ನ ಮೇಲಾಧಿಕಾರಿ ಆಗಿರುವ ಕಾರಣ ಅವರು ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.